ವಿದೇಶದಲ್ಲಿದ್ದ. ನಿರಾಕರಿಸಲು ಕಾರಣಗಳೇ ತೋಚಲಿಲ್ಲವಾದರೂ ಪಿಎಚ್.ಡಿ. ಮಾಡ್ತೀನಿ ಅಂತ ಹಟ ಹಿಡಿದೆ. ಮದುವೆಯಾದ್ಮೇಲೆ ಮಾಡ್ಕೋವಂತೆ ಎಂದು ಅಪ್ಪ ರಾಂಗ್ ಆಗಿಬಿಟ್ಟರು. ಅವರಿಗೆ ನಮ್ಮ ಪ್ರೇಮಕಥೆಯ ಅಂದಾಜಿದ್ದಿತೇನೋ. 'ನೋಡ್ ತಾಯಿ. ಪ್ರೇಮಗೀಮ ಎಲ್ಲಾ ಸಿನಿಮಾದಾಗಷ್ಟೆ ಚೆಂದ' ಎಂದು ಗದರಿಯೂ ಬಿಟ್ಟರು. ಇವನನ್ನು ರವೀಂದ್ರ ಕಲಾಕ್ಷೇತ್ರದ ಬಳಿ ಹಿಡಿದು ಅಲವತ್ತುಕೊಂಡೆ. 'ಮೋಸ ಮಾಡ್ತಿಯೇನೆ? ವಂಚಕಿ ನೀನು. ಈ ಹುಡ್ಗೀರೇ ಇಷ್ಟು' ಎಂದೆಲ್ಲಾ ಕೂಗಾಡಿ ರೇಜಿಗೆ ಹುಟ್ಟಿಸಿದ. 'ನನ್ನನ್ನು ಮೀಟ್ ಮಾಡೋ ಪ್ರಯತ್ನ ಮಾಡ್ಬೇಡ. ಐ ಆಮ್ ಗೋಯಿಂಗ್ ಟು ಮ್ಯಾರೇಜ್' ಅಂದು ಸ್ಕೂಟರ್ ಏರಿದೆ. ಆಮೇಲೆ ಅವನೆಂದೂ ಭೇಟಿಯಾಗಲೇ ಇಲ್ಲ.

ವಿದೇಶದಲ್ಲಿ ಗಂಡನ ತೆಕ್ಕೆಯಲ್ಲಿ ವರ್ಷಗಳುರುಳಿದ್ದೇ ತಿಳಿಯಲಿಲ್ಲ. ಜೀವನ ಸೊಗಸಾಗಿತ್ತು. ವರ್ಷವಾದಂತೆಲ್ಲಾ ಗಂಡನ ಒಂದೊಂದೇ ವೀಕ್‌ನೆಸ್ ದೊಡ್ಡದಾಗಿ ಕಾಣಲಾರಂಭಿಸಿದವು. ಮೊದಲೇ ಅವನಲ್ಲಿ ದುಶ್ಚಟಗಳಿದ್ದವೋ ಹೊಸದಾಗಿ ರೂಢಿಸಿಕೊಂಡನೋ. ಸೈರಣೆಗೆಟ್ಟೆ. ಹೆಣ್ಣಷ್ಟೇ ಅಲ್ಲ, ಗಂಡೂ ನೈತಿಕವಾಗಿ ಬಾಳಬೇಕು ಎಂದು ಜೋರಾದೆ. ನೀನು ಇಂಡಿಯಾಕ್ಕೇ ಲಾಯಕ್ಕು ಅಂತ ನೆಗ್ಲೆಕ್ಟ್ ಮಾಡಿದ. ಯಾವುದಕ್ಕೂ ಕಡಿಮೆ ಇರಲಿಲ್ಲವಾದರೂ ಅವನೇ ಸರಿ ಇರಲಿಲ್ಲ. ಜಗಳ ಮನಸ್ತಾಪದಲ್ಲಿಯೇ ದಿನಗಳು ಕಂಗೆಟ್ಟವು. ಒಂದೆರಡು ಸಲ ಬೆಂಗಳೂರಿಗೆ ಬಂದಾಗ ಅಪ್ಪನ ಬಳಿ ದೂರಿದೆ. ಹೊಂದಿಕೊಂಡು ಹೋಗಬೇಕು ಮಗಳೆ ಎಂದು ನನಗೇ ತಿಳಿ ಹೇಳಿದರು. ಆಗೀಗ ಬಂದಾಗ ಮಾಜಿ ಪ್ರೇಮಿಯ ಸುದ್ದಿಯೂ ಕಿವಿಗೆ ಬೀಳೋದು. ಅವನು ಅಸಿಸ್ಟೆಂಟ್ ಆಗಿ ದೊಡ್ಡ ನಿರ್ದೇಶಕರ ಬಳಿ ಕೆಲಸ ಮಾಡ್ತಿದಾನೆ ಅನ್ನೋರು ಗೆಳತಿಯರು. ಯಾವುದೋ ಕನ್ನಡ

